**ದಿನಾಂಕಃ 12-07-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು ಶ್ರೀ ಎಮ್ ಎನ್ ಎಲ್ ವಕೀಲರಿಂದಃ**

2. ಮೂಲ ಪುರುಷ ಜಟ್ಟು ಬಾಬು ಗೌಡ ನನ್ನ ದೊಡ್ಡಪ್ಪ. ಈಗ ಮಾರು ಜಟ್ಟು ಗೌಡ ರವರ ವಾರಸುದಾರರು ನಾವು ಎಂದು ಈ ಅರ್ಜಿ ಸಲ್ಲಿಸಿದ್ದೇವೆ. ಮಾರು ಜಟ್ಟು ಗೌಡರ ತಂದೆಗೆ ಇನ್ನೊಬ್ಬ ಮಗ ಇದ್ದ ಅವನ ಹೆಸರು ಬಾಬು ಜಟ್ಟು ಗೌಡ. ಮಾರು ಜಟ್ಟು ಗೌಡ ಮತ್ತು ಬಾಬು ಜಟ್ಟು ಗೌಡ ರ ನಡುವೆ ಬಹಳ ಹಿಂದೆ ವಾಂಟಣಿಯಾಗಿದೆ ಎಂದರೆ ಸರಿಯಲ್ಲ. ಮಾರು ಜಟ್ಟು ಗೌಡ ಮೃತಪಟ್ಟಾಗ ಅವನಿಗೆ ಏನೇನು ಆಸ್ತಿ ಇತ್ತು ಎಂದು ನನ್ನ ತಂದೆಗೆ ಗೊತ್ತಿತ್ತು. ಬಾಬು ಜಟ್ಟು ಗೌಡ ಹಿರಿಯವನು ಮಾರು ಜಟ್ಟು ಗೌಡ ಅವನ ತಮ್ಮ ಆಗಿರುತ್ತಾನೆ. ಮಾರು ಜಟ್ಟು ಗೌಡ ಕಾಲವಾದ ಮೇಲೆ ಅವನ ಆಸ್ತಿಗಳ ಖಾತೆಯನ್ನು ನನ್ನ ತಂದೆ ಹೆಸರಿಗೆ ಬದಲಾಯಿಸುವಂತೆ ಅರ್ಜಿ ಸಲ್ಲಿಸಿರುವುದಿಲ್ಲ, ಕಾರಣ ಅದು ಕುಟುಂಬಕ್ಕೆ ಸಂಬಂಧಪಟ್ಟ ಆಸ್ತಿಯಾಗಿತ್ತು. ಮಾರು ಜಟ್ಟು ಗೌಡ ಕಾಲವಾದ ಮೇಲೆ ಅವನ ಹೆಸರಿನಲ್ಲಿದ್ದ ಆಸ್ತಿಗಳು ನನ್ನ ತಂದೆ ಹಾಗೂ ನನ್ನ ತಂದೆಯ ಅಣ್ಣತಮ್ಮಂದಿರ ಹೆಸರಿಗೆ ಖಾತೆಯಾಗಿದೆ. ಬಾಬು ಜಟ್ಟು ಗೌಡನಿಗೆ 3 ಜನ ಮಕ್ಕಳು.

2. ಸುಬ್ರಾಯ ಯಾನೆ ಶಿವಾನಂದ ಮಂಜುನಾಥ ನಾಯಕ್ ಅಂದರೆ ಎದುದರರ ಇದೇ ನ್ಯಾಯಾಲಯದಲ್ಲಿ P and SC 2/2000 ಅರ್ಜಿಯನ್ನು ಸಲ್ಲಿಸಿದ್ದ ಎಂದರೆ ಗೊತ್ತಿಲ್ಲ. ನಾನು ನನ್ನ ತಂದೆ ಮತ್ತು ನನ್ನ ಸಹೋದರರು ಯಾವ ಯಾವ ಪತ್ರಿಕೆ ಓದುತ್ತೇವೆ ಎಂದರೆ ನನ್ನ ತಂದೆ ಮತ್ತು ಅವರ ಅಣ್ಣತಮ್ಮಂದಿರರಿಗೆ ಓದಲು ಬರೆಯಲು ಬರುವುದಿಲ್ಲ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದುವರಿದ ಪಾಟಿ ಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ

**ದಿನಾಂಕಃ 12-07-2024 ರಂದು ಸಾಕ್ಷಿಗೆ ಪುನಃ ಮಧ್ಯಾಹ್ನ 3.00 ಗಂಟೆಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿ ಸವಾಲು ಶ್ರೀ ಎಮ್ ಎನ್ ಎಲ್ ವಕೀಲರಿಂದಃ**

3. ಹೊನ್ನಾವರದ ಗುಣಗುಣಕೇರಿಯಲ್ಲಿ ನನ್ನ ಜನಾಂಗದವರು ಹೆಚ್ಚು ಜನ ಇದ್ದಾರೆ ಎಂದರೆ ಹೌದು. ಅಲ್ಲಿ ವಿದ್ಯಾವಂತರು ಬಹಳಷ್ಟು ಜನ ಇದ್ದಾರೆ ಎಂದರೆ ಸರಿಯಲ್ಲ. ಅಲ್ಲಿ ಜನರ ಜೊತೆ ನನಗೆ ಸಂಬಂಧ ಚನ್ನಾಗಿಯೇ ಇದೆ ಎಂದರೆ ಹೌದು. ನಮ್ಮ ತಂದೆ, ದೊಡ್ಡಪ್ಪ ಮತ್ತು ಚಿಕ್ಕಪ್ಪನ ಮೊಕ್ತಾರನಾಮೆದಾರ ಜಟ್ಟು ಬೇಡು ಗೌಡ ಒಂದು ರಾಜಕೀಯ ಪಕ್ಷದಲ್ಲಿ ಸಕ್ರಿಯವಾಗಿ ಕಾರ್ಯಕರ್ತ ಎಂದರೆ ಇರಬಹುದು, ನನಗೆ ಗೊತ್ತಿಲ್ಲ. ಅವನು ವಿದ್ಯಾಭ್ಯಾಸ ಮಾಡಿದ ವ್ಯಕ್ತಿ ಎಂದರೆ ಅವರಿಗೆ ಸ್ವಲ್ಪ ವಿದ್ಯಾಭ್ಯಾಸ ಇದೆ. ನಮ್ಮ ಕೇರಿಗೆ ಕರಾವಳಿ ಮುಂಜಾವು ಹಾಗೂ ಹೊನ್ನಾವರ ಪಟ್ಟಣದಲ್ಲಿ ಪ್ರಚಾರ ಆಗುವ ನಾಗರೀಕ ಪತ್ರಿಕೆ ಬರುತ್ತದೆ ಎಂದರೆ ಗೊತ್ತಿಲ್ಲ. ನಮ್ಮ ಕೇರಿಯಲ್ಲಿ ಬಹಳಷ್ಟು ಜನರ ಮನೆಗೆ ಪತ್ರಿಕೆಗಳು ಬರುತ್ತವೆ ಎಂದರೆ ನನಗೆ ಗೊತ್ತಿಲ್ಲ. P and SC 2/2000 ರಲ್ಲಿ ಆ ಪ್ರಕರಣ ಹಾಕಿದಾಗ ನಮ್ಮ ಕೇರಿಯಲ್ಲಿ ಟಾಮ್ ಟಾಮ್ ಮೂಲಕ ಆ ಪ್ರಕರಣದ ದಾಖಲು ಆಗಿರುವ ಬಗ್ಗೆ ಪ್ರಚಾರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕರಾವಳಿ ಮುಂಜಾವು ಪತ್ರಿಕೆಯಲ್ಲಿ ಸಹ ಸದರಿ ಪ್ರಕರಣ ಹಾಕಿದ ಬಗ್ಗೆ ಪ್ರಕಟಣೆ ಹೊರಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದೊಡ್ಡಪ್ಪ ಮತ್ತು ಚಿಕ್ಕಪ್ಪ ಹೊನ್ನಾವರ ತಾಲೂಕಿನ ಗುಣಗುಣಿಕೇರಿಯ ಖಾಯಂ ವಾಸಿಗಳು ಎಂದರೆ ಹೌದು. ಎದುರುದಾರ P and SC 2/2000 ಪ್ರಕರಣ ದಾಖಲು ಮಾಡಿದ ವಿಚಾರ ನನ್ನ ತಂದೆ, ದೊಡ್ಡಪ್ಪ ಮತ್ತು ಚಿಕ್ಕಪ್ಪನವರೆಲ್ಲರಿಗೂ ಗೊತ್ತಿತ್ತು ಎಂದರೆ ಸರಿಯಲ್ಲ. ಅವರಿಗೆ ಆ ಪ್ರಕರಣದ ವಿಚಾರ ಗೊತ್ತಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎ ಪಿ ಎಮ್ ಸಿ

ದವರು ಜಮೀನು ಸ್ವಾಧೀನ ಮಾಡಿಕೊಂಡ ಬಗ್ಗೆ ಅತ್ಯಲ್ಪ ಪರಿಹಾರ ನೀಡಿದ್ದರು ಮತ್ತು ಈಗ ಸಿವಿಲ್ ನ್ಯಾಯಾಲಯದಲ್ಲಿ ಹೆಚ್ಚಿನ ಪರಿಹಾರ ಮಂಜೂರು ಮಾಡಿರುವುದರಿಂದ ಹಣದ ಆಸೆಗಾಗಿ ಈ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. P and SC 2/2000 ಪ್ರಕರಣ ದಾಖಲು ಮಾಡಿದ ವಿಚಾರ ನಮಗೆ ಆಗಲೇ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅರ್ಜಿಯನ್ನು ಅಂಗೀಕರಿಸಲು ಸಬಲ ಕಾರಣ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ